# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಮಾನ್ಯ ಸದಸ್ಯರ ಹೆಸರು | : | ಶ್ರೀ ಕೆ ವಿವೇಕಾನಂದ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) |
| 2 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | (2461) (2184) |
| 3 | ಉತ್ತರಿಸಬೇಕಾದ ದಿನಾಂಕ | : | 27.03.2026 |
| 4 | ಉತ್ತರಿಸುವ ಸಚಿವರು | : | ಕಾರ್ಮಿಕ ಸಚಿವರು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಇ.ಎಸ್.ಐ ಆಸ್ಪತ್ರೆಗಳ ಸಂಖ್ಯೆ ಎಷ್ಟು; ಅವುಗಳು ಯಾವುವು; (ಜಿಲ್ಲಾವಾರು ಮಾಹಿತಿ ನೀಡುವುದು); | ಕರ್ನಾಟಕ ರಾಜ್ಯದಲ್ಲಿ ರಾಜ್ಯ ಸರ್ಕಾರದ ಕಾರಾವಿ ಯೋಜನೆ ವೈ ಸೇವೆಗಳ ಇಲಾಖೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇ.ಎಸ್.ಐ ಆಸ್ಪತ್ರೆಗಳ **ಸಂಖ್ಯೆ: 07**<br><br>ಕೇಂದ್ರ ಸರ್ಕಾರದ ಕಾರಾವಿ ನಿಗಮದಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಇ.ಎಸ್.ಐ ಆಸ್ಪತ್ರೆಗಳ **ಸಂಖ್ಯೆ:03**<br><br>ಜಿಲ್ಲಾವಾರು ಆಸ್ಪತ್ರೆಗಳ ಮಾಹಿತಿಯನ್ನು **ಅನುಬಂಧ-1 ರಲ್ಲಿರಿಸಿದೆ**. |
| ಆ) | ಈ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಸಕಾಲಕ್ಕೆ ಚಿಕಿತ್ಸೆ ನೀಡುತ್ತಿಲ್ಲವೆಂದು ವರದಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಈ ಸಂಬಂದ ಯಾವುದೇ ವರದಿ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |
| ಇ) | ಸರ್ಕಾರದ ಗಮನಕ್ಕೆ ಬಂದಿದ್ದರೆ, ದಿನನಿತ್ಯ ಆಗಮಿಸುವ ರೋಗಿಗಳಿಗೆ ಉತ್ತಮ ಗುಣಮಟ್ಟದ ಚಿಕಿತ್ಸೆ ನೀಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; | ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಆದಾಗ್ಯೂ ದಿನನಿತ್ಯ ಆಗಮಿಸುವ ರೋಗಿಗಳಿಗೆ ಉತ್ತಮ ಗುಣಮಟ್ಟದ ಚಿಕಿತ್ಸೆ ನೀಡುವ ಸಲುವಾಗಿ ರಾಜ್ಯದಲ್ಲಿ ವಿಮಾ ರೋಗಿಗಳಿಗೆ ಗುಣಮಟ್ಟದ ಚಿಕಿತ್ಸೆಯನ್ನು ನೀಡಲು ಸಲುವಾಗಿ ಕಾರಾವಿ ಆಸ್ಪತ್ರೆಗಳಲ್ಲಿ ಚಿಕಿತ್ಸಾ ಸೌಲಭ್ಯಗಳು ಮತ್ತು ತುರ್ತು ಸೌಲಭ್ಯಗಳನ್ನು ಸುಧಾರಿಸಲು ರೂ. 12,26,53,627.00 ವೆಚ್ಚದಲ್ಲಿ ICU ಕಾಮಗಾರಿಗೆ ಹಾಗೂ ರೂ.7,60,30,499.00 ವೆಚ್ಚದಲ್ಲಿ Modular OT ನಿರ್ಮಿಸಲು work order ಅನ್ನು ನೀಡಲಾಗಿರುತ್ತದೆ.<br><br>ರೂ.34.00 ಕೋಟಿ ರೂಪಾಯಿ ವೆಚ್ಚದಲ್ಲಿ ವಿಭಾಗವಾರು ಆಧುನಿಕ ವೈದ್ಯಕೀಯ ಉಪಕರಣಗಳ ಖರೀದಿಗಾಗಿ ಟೆಂಡರ್ ಹೊರಡಿಸಿದ್ದು, ಟೆಂಡರ್ ಪ್ರಕ್ರಿಯೆ ಅಂತಿಮ ಹಂತದಲ್ಲಿರುತ್ತದೆ. |

| | | |
|---|---|---|
| | | ದ್ವಿತೀಯ ಹಂತದ ಚಿಕಿತ್ಸೆಯ ಎಲ್ಲಾ ಸೌಲಭ್ಯಗಳನ್ನು ಎಲ್ಲಾ ಕಾರಾವಿ ಆಸ್ಪತ್ರೆಗಳಲ್ಲಿಯೇ ದೊರೆಯುವಂತೆ ಮೇಲ್ದರ್ಜೆಗೇರಿಸಲು Dialysis ಘಟಕ ಸ್ಥಾಪನೆ (ರೂ.5.00 ಕೋಟಿ ವೆಚ್ಚ), Ayush ಘಟಕಗಳ (ರೂ.3.00 ಕೋಟಿ ವೆಚ್ಚ) ಸ್ಥಾಪನೆಗೂ ಕಾರ್ಯಕ್ರಮ ರೂಪಿಸಲಾಗಿದ್ದು, ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿರುತ್ತದೆ ಹಾಗೂ ಹಬ್ ಮತ್ತು ಸ್ಪೋಕ್ ವಿಧಾನದಿಂಧ ಡಯಾಗ್ನೋಸ್ಟಿಕ್ ಲ್ಯಾಬೋರೇಟರಿಗಳನ್ನು ಉನ್ನತೀಕರಸಲು ಕ್ರಮಕೈಗೊಳ್ಳಲಾಗುತ್ತಿದೆ.<br><br>ಕಾರಾವಿ ಆಸ್ಪತ್ರೆಗಳ ಬೇಡಿಕೆಗೆನುಸಾರ ಔಷಧಗಳನ್ನು ಪೂರೈಸಲು Medical Drug Purchase Streamline ಮಾಡಲಾಗುತ್ತಿದೆ.<br><br>ಇಲಾಖೆಯಲ್ಲಿ ಖಾಲಿ ಇರುವ ವೈದ್ಯಾಧಿಕಾರಿ ಹುದ್ದೆಗಳ ಎದುರಾಗಿ ಇಲಾಖೆಗೆ 32 ವೈದ್ಯಾಧಿಕಾರಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲಾಗಿದೆ. |
| ಈ) | ಇ. ಎಸ್. ಐ ಆಸ್ಪತ್ರೆಗೆ ಬೇಕಾಗಿರುವ ಔಷಧಿ ಸರಬರಾಜು ಮತ್ತು ವೈದ್ಯಕೀಯ ಸಂಬಂಧಿತ ವಸ್ತುಗಳನ್ನು ಸರಬರಾಜು ಮಾಡುವ ಕಂಪನಿಗಳಿಗೆ ಸರ್ಕಾರ ಸಕಾಲಕ್ಕೆ ಸರಬರಾಜು ಹಣವನ್ನು ಪಾವತಿ ಮಾಡದೇ ಇರುವುದರಿಂದ ಈ ಕಂಪನಿಗಳು ಇ. ಎಸ್. ಐ ಆಸ್ಪತ್ರೆಗಳಿಗೆ ಔಷಧಿ ಸರಬರಾಜು ಸಕಾಲಕ್ಕೆ ಸರಬರಾಜು ಮಾಡುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಇಂತಹ ಯಾವುದೇ ಮಾಹಿತಿಯು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.<br><br>ಕಾರ್ಮಿಕ ವಿಮಾದಾರರಿಗೆ ಅತ್ಯವಶ್ಯವಿರುವ ಉತ್ಕೃಷ್ಟ ಔಷಧಿಗಳು ಮತ್ತು ಇತರೆ ಸಾಮಾನ್ಯ ಔಷಧಿಗಳನ್ನು ಸರಬರಾಜು ಮಾಡಲು 2025 ನೇ ಸಾಲಿನ ಜುಲೈ ತಿಂಗಳ ಅಂತಿಮ ವಾರದಲ್ಲಿ ರೂ.55.00 ಕೋಟಿಗಳಿಗೆ ಸರಬರಾಜು ಆದೇಶ ಹೊರಡಿಸಲಾಗಿರುತ್ತದೆ. ಸದರಿ ಸರಬರಾಜು ಆದೇಶಕ್ಕನುಗುಣವಾಗಿ ರೂ.53.00 ಕೋಟಿಗಳ ಮೊತ್ತದ ಔಷಧಗಳು ಇಲಾಖೆಗೆ ಸರಬರಾಜಾಗಿದ್ದು, ರೂ.53.00 ಕೋಟಿಗಳ ಮೊತ್ತವನ್ನು ಪಾವತಿಸಲಾಗಿರುತ್ತದೆ. |
| ಉ) | ಸರ್ಕಾರದ ಗಮನಕ್ಕೆ ಬಂದಿದ್ದರೆ ಈ ರೀತಿಯ ಔಷಧಿ ಕಂಪನಿಗಳಿಗೆ ಸರ್ಕಾರ ನೀಡಬೇಕಾಗಿರುವ ಬಾಕಿ ಹಣದ ಮೊತ್ತ ಎಷ್ಟು? | ಅನ್ವಯಿಸುವುದಿಲ್ಲ. |

**ಕಡತ ಸಂಖ್ಯೆ: ಕಾಇ 91 ಎಲ್‌ಸ್‌ಐ 2026.**

**(ಸಂತೋಷ್ ಲಾಡ್)**
ಕಾರ್ಮಿಕ ಸಚಿವರು.

**ಅನುಬಂಧ-1**

- ಕರ್ನಾಟಕ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು ಇ.ಎಸ್.ಐ ಆಸ್ಪತ್ರೆಗಳ ಸಂಖ್ಯೆ: 10
- ಇದರಲ್ಲಿ ರಾಜ್ಯ ಸರ್ಕಾರದ ಕಾರಾವಿ ಯೋ ವೈ ಸೇವೆಗಳ ಇಲಾಖೆಯಡಿಲ್ಲಿ ಕಾರ್ಯನಿರ್ವಹಿಸುತ್ತಿರುವ ಇ.ಎಸ್.ಐ ಆಸ್ಪತ್ರೆಗಳ ಸಂಖ್ಯೆ:07
- ಕೇಂದ್ರ ಸರ್ಕಾರದ ಕಾರಾವಿ ನಿಗಮದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇ.ಎಸ್.ಐ ಆಸ್ಪತ್ರೆಗಳ ಸಂಖ್ಯೆ:03

- ರಾಜ್ಯ ಸರ್ಕಾರದ ಕಾರಾವಿ ಯೋ ವೈ ಸೇವೆಗಳ ಇಲಾಖೆಯಡಿಲ್ಲಿ ಕಾರ್ಯ ನಿರ್ವಹಿಸುತ್ತಿರುವ ಇ.ಎಸ್.ಐ ಆಸ್ಪತ್ರೆಗಳ ವಿವರ:

| ಕ್ರಮ ಸಂಖ್ಯೆ | ಆಸ್ಪತ್ರೆ | ಜಿಲ್ಲೆ |
|---|---|---|
| 1 | ಕಾರಾವಿ ಆಸ್ಪತ್ರೆ ಇಂದಿರಾನಗರ | ಬೆಂಗಳೂರು ಜಿಲ್ಲೆ |
| 2 | ಕಾರಾವಿ ಆಸ್ಪತ್ರೆ ಮೈಸೂರು | ಮೈಸೂರು ಜಿಲ್ಲೆ |
| 3 | ಕಾರಾವಿ ಆಸ್ಪತ್ರೆ ಮಂಗಳೂರು | ದಕ್ಷಿಣ ಕನ್ನಡ ಜಿಲ್ಲೆ |
| 4 | ಕಾರಾವಿ ಆಸ್ಪತ್ರೆ ದಾವಣಗೆರೆ | ದಾವಣಗೆರೆ ಜಿಲ್ಲೆ |
| 5 | ಕಾರಾವಿ ಆಸ್ಪತ್ರೆ ದಾಂಡೇಲಿ | ಉತ್ತರ ಕನ್ನಡ ಜಿಲ್ಲೆ |
| 6 | ಕಾರಾವಿ ಆಸ್ಪತ್ರೆ ಹುಬ್ಬಳಿ | ಧಾರವಾಡ ಜಿಲ್ಲೆ |
| 7 | ಕಾರಾವಿ ಆಸ್ಪತ್ರೆ ಬೆಳಗಾವಿ | ಬೆಳಗಾವಿ ಜಿಲ್ಲೆ |

- ಕೇಂದ್ರ ಸರ್ಕಾರದ ಕಾರಾವಿ ನಿಗಮದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇ.ಎಸ್.ಐ ಆಸ್ಪತ್ರೆಗಳ ವಿವರ:

| ಕ್ರಮ ಸಂಖ್ಯೆ | ಆಸ್ಪತ್ರೆ | ಜಿಲ್ಲೆ |
|---|---|---|
| 1 | ಕಾರಾವಿ ನಿಗಮ ಮಾದರಿ ಆಸ್ಪತ್ರೆ ರಾಜಾಜಿನಗರ | ಬೆಂಗಳೂರು ಜಿಲ್ಲೆ |
| 2 | ಕಾರಾವಿ ನಿಗಮ ಮಾದರಿ ಆಸ್ಪತ್ರೆ ಪೀಣ್ಯ | ಬೆಂಗಳೂರು ಜಿಲ್ಲೆ |
| 3 | ಕಾರಾವಿ ನಿಗಮ ಮಾದರಿ ಆಸ್ಪತ್ರೆ ಕಲಬುರಗಿ | ಕಲಬುರಗಿ ಜಿಲ್ಲೆ |

ಆಯುಕ್ತರು
ಕಾರಾವಿಯೋ ವೈ ಸೇವೆಗಳು